**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**

**ಎಸ್.ಸಿ. ನಂಃ 01/2018**

ಪ್ರಾಸಾ ಃ 1 (ಚಾಸಾ ಃ 2 )

ಪ್ರಮಾಣೀಕರಿಸಿದ ದಿನಾಂಕಃ **03-05-2018**

ಹೆಸರು ಃ ವೆಂಕಟರೆಡ್ಡಿ

ತಂದೆಯ ಹೆಸರು ಃ ನಾರಾಯಣಪ್ಪ

ವಯಸ್ಸು ಃ 48 ವರ್ಷ

ಕೆಲಸ ಃ ಕೂಲಿ

ವಾಸ ಃ ಬೆಟ್ಟಗೇರಹಳ್ಳಿ

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನನ್ನ ಸ್ವಂತ ಊರು ಚಿಂತಾಮಣಿ ತಾಲ್ಲೂಕಿನ ಊಲವಾಡಿ ಗ್ರಾಮ, ನನಗೆ 4 ಜನ ಮಕ್ಕಳು, ಹಿರಿಯ ಮಗಳ ಹೆಸರು ಸುನಿತ, 2ನೇಯವಳು ಶಿಲ್ಪ, 3ನೇಯವಳು ನೊಂದ ಬಾಲಕಿ. ಬೆಟ್ಟಗೇರಹಳ್ಳಿ ಗ್ರಾಮಕ್ಕೆ ನನ್ನ ಇಬ್ಬರು ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಕೊಟ್ಟಿರುತ್ತೇನೆ. ನಾರಾಯಣಸ್ವಾಮಿ, ಸುನಿತಳ ಗಂಡ. ನೊಂದಬಾಲಕಿಯನ್ನು ಚಿಕ್ಕ ಮಗುವಾಗಿದ್ದಾಗಿನಿಂದ ನಾರಾಯಣಸ್ವಾಮಿ ಅವರ ಮನೆಗೆ ಕರೆದುಕೊಂಡು ಹೋಗಿ ಸಾಕಿಕೊಂಡಿದ್ದರು. ಸುಮಾರು 4 ವರ್ಷಗಳ ಹಿಂದೆ ನಾರಾಯಣಸ್ವಾಮಿಗೆ ಮರದ ಮೇಲಿನಿಂದ ಬಿದ್ದು ಕಾಲು ಮುರಿದಿತ್ತು, ಸುಮಾರು 6 ತಿಂಗಳ ಹಿಂದೆ ಆ ರಾಡನ್ನು ತೆಗೆಸಲು ಜಾಲಪ್ಪ ಆಸ್ಪತ್ರೆಯಲ್ಲಿ ದಾಖಲಿಸಿದ್ದೆವು. ನಾನು ಮತ್ತು ನನ್ನ ಹೆಂಡತಿ ಆಸ್ಪತ್ರೆಯಲ್ಲಿ ನೋಡಿಕೊಳ್ಳುತ್ತಿದ್ದೆವು. ಬೆಳಿಗ್ಗೆ 10.00 ಗಂಟೆಗೆ ನಮ್ಮ ಊರಿಗೆ ವಾಪಸ್ಸು ಬಂದೆವು. ನೊಂದ ಬಾಲಕಿ ನಮ್ಮ ಮನೆಯಲ್ಲಿದ್ದು, ನಾವು ಹೋದಾಗ ರಾತ್ರಿ 10.00 ಗಂಟೆಗೆ ಮೂತ್ರ ವಿಸರ್ಜನೆಗೆ ಹೋಗಿದ್ದಾಗ ಮುನಿರಾಜು ನನ್ನ ಮಗಳನ್ನು ಅವರ ಮನೆಗೆ ಎತ್ತಿಕೊಂಡು ಹೋಗಿ ಅತ್ಯಾಚಾರ ಮಾಡಿದ್ದಾಗಿ ಹೇಳಿದಳು.

ನಾವು ಈ ವಿಷಯವನ್ನು ಊರಿನ ಹಿರಿಯರಿಗೆ ಹೇಳಿ ಈ ಬಗ್ಗೆ ಪಂಚಾಯಿತಿ ಮಾಡಿದೆವು. ಆರೋಪಿ ಮುನಿರಾಜುವಿಗೆ ಮದುವೆ ಮಾಡಿಕೊಳ್ಳುವುದಾಗಿ ಹೇಳಿ ಒಂದು ತಿಂಗಳು ಸಮಯ ಕೊಟ್ಟಿದ್ದರು. ನಂತರ 1ನೇ ಆರೋಪಿಗೆ ಬೇರೆ ಕಡೆ ಸಂಬಂಧ ಹುಡುಕಲು ಪ್ರಯತ್ನ ಪಟ್ಟರು.

ನಂತರ ನನ್ನ ಮಗಳು ಪಾತ್ರೆ ಮತ್ತು ಬಟ್ಟೆ ತೊಳೆಯಲು ಒಂದು ಫರ್ಲಾಂಗ್ ದೂರದ ಕೆರೆಗೆ ಹೋಗಿದ್ದಾಗ ಯಾರೋ ಬಂದು ನಿಮ್ಮ ಹುಡುಗಿ ಕೆರೆಯ ಬಳಿ ಬಿದ್ದಿದ್ದಾಳೆ ಎಂದು ಹೇಳಿದರು. ನಾವು ಹೋಗಿ ಹೋಗಿ ಆಕೆಯನ್ನು ಕೋಲಾರದ ಎಸ್ಎನ್ಆರ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. ಹೆಚ್ಚಿನ ಚಿಕಿತ್ಸೆಗಾಗಿ ನಂತರ ಜಾಲಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆಕೆಯನ್ನು ವಿಚಾರಣೆ ಮಾಡಿದಾಗ ಉಳಿದ ಆರೋಪಿತರು ಕೆರೆಯ ಬಳಿ ಬಂದು ಏನನ್ನೋ ಬಾಟಲಿನಲ್ಲಿ ತಂದು ಕುಡಿಸಿದರು ಎಂದು ಹೇಳಿದರು. ಪೊಲೀಸರು ವಿಚಾರಣೆ ಮಾಡಿದಾಗ ಈ ಎಲ್ಲಾ ವಿಚಾರ ಹೇಳಿದ್ದೇನೆ.

**ಪಾಟೀ ಸವಾಲುಃ- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ ಃ-**

ನಾನು ಬೇಟ್ಟಗೇರಹಳ್ಳಿಯಲ್ಲಿ 8 ವರ್ಷಗಳಿಂದ ವಾಸ ಇದ್ದೇನೆ. ನನ್ನ ಮಗಳು ಸುನಿತ ರವರ ಮದುವೆಯಾಗಿ 13 ವರ್ಷಗಳಾಗಿತ್ತು, ಅದಕ್ಕಿಂತ ಮೊದಲು ಚಿಂತಾಮಣಿಯ ಊಲವಾಡಿ ಗ್ರಾಮದಲ್ಲಿ ವಾಸವಾಗಿದ್ದೆವು. ಬೆಟ್ಟಗೇರಹಳ್ಳಿಯಲ್ಲಿ ಸುನಿತರ ರವರ ಮನೆಯಲ್ಲಿ ಒಟ್ಟು 11 ಜನ ವಾಸವಾಗಿದ್ದೆವು. ನಾರಾಯಣಸ್ವಾಮಿ, ಸುನಿತ, ಅವರ ಇಬ್ಬರು ಮಕ್ಕಳು, ನನ್ನ ಇನ್ನೊಬ್ಬ ಮಗಳು ಶಿಲ್ಪ ರವರನ್ನು ನಾರಾಯಣಸ್ವಾಮಿ ತಮ್ಮ ನಾಗರಾಜುಗೆ ಕೊಟ್ಟು ಮದುವೆ ಮಾಡಿದ್ದೆವು. ನಾರಾಯಣಸ್ವಾಮಿ ತಮ್ಮ ರವಿ ಸಹ ಅಲ್ಲಿ ವಾಸ ಇದ್ದರು, ನಾರಾಯಣಸ್ವಾಮಿ, ಸುನಿತ, ಲಕ್ಷ್ಮಿದೇವಮ್ಮ ವೆಂಕಟಸ್ವಾಮಿ ಬೇರೆ ವಾಸ ಇದ್ದಾರೆ. ನಾಗರಾಜು, ರವಿ ಒಟ್ಟಿಗೆ ಇದ್ದಾರೆ. ಅವರ ಮತ್ತು ನಮ್ಮ ಮನೆ ಅಕ್ಕ ಪಕ್ಕ ಇದೆ.

ನಾವು ಆಸ್ಪತ್ರೆಗೆ ಹೋದ ದಿನ ನಾಗರಾಜು, ರವಿ, ಕದಿರಮ್ಮ ಮತ್ತು ಶಿಲ್ಪ ಮನೆಯಲ್ಲಿದ್ದಳು. ಅವರ ಮತ್ತು ನಮ್ಮ ಮನೆ ಬೇರೆ ಬೇರೆ ಇದೆ. ನಾವು ಆ ದಿನ ಗಾಬರಿ ಇದ್ದುದರಿಂದ ಏನೂ ಹೇಳದೇ ಆಸ್ಪತ್ರೆಗೆ ಬಂದಿದ್ದೆವು. ಆ ಊರಿನಲ್ಲಿರುವುದು ಒಂದೇ ಮನೆ ಮತ್ತು ಎಲ್ಲರೂ ಒಂದೇ ಮನೆಯಲ್ಲಿ ವಾಸ ಇದ್ದೇವೆ ಎಂದರೆ ಸರಿಯಲ್ಲ. ನನ್ನ ಮಗಳನ್ನು ಊಲವಾಡಿ ಗ್ರಾಮದಲ್ಲಿ ಶಾಲೆಗೆ ಸೇರಿಸಿರಲಿಲ್ಲ. ನಾವು ಹೇಳಿದಂತೆ ನಾರಾಯಣಸ್ವಾಮಿಯನ್ನು ಆಸ್ಪತ್ರೆಗೆ ದಾಖಲಿಸಿರಲಿಲ್ಲ ಮತ್ತು ನಾವು ಆಸ್ಪತ್ರೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನಾರಾಯಣಸ್ವಾಮಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಗ್ಗೆ ಮತ್ತು ನಾವು ಅಲ್ಲಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಪೋಲೀಸರಿಗೆ ಕೊಟ್ಟಿಲ್ಲ.

ಮುನಿರಾಜು ರವರ ಮನೆಯ ಪೂರ್ವಕ್ಕೆ ಖಾಲಿ ಜಾಗ, ಪಶ್ಚಿಮಕ್ಕೆ ಕದಿರಮ್ಮ ರವರ ಮನೆ ಎಂದರೆ ಸರಿಯಲ್ಲ, ದಕ್ಷಿಣಕ್ಕೆ ರಸೆ, ಉತ್ತರಕ್ಕೆ ಕದಿರಮ್ಮ ರವರ ಮನೆ ಇದೆ. ನಮ್ಮ ವಾಸದ ಮನೆಯ ಪೂರ್ವಕ್ಕೆ ಮುನಿಯಪ್ಪ ರವರ ಮನೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಆರೋಪಿತರ



ಮನೆ, ದಕ್ಷಿಣಕ್ಕೆ ಕದಿರಮ್ಮ ರವರ ಮನೆ ಇದೆ. ನಮ್ಮ ಮತ್ತು ಆರೋಪಿತರ ಮನೆಯ ಸುತ್ತ ಮುತ್ತ ಸುಮಾರು 20 ಮನೆಗಳು ಇವೆ. ಆ ಮನೆಗಳಲ್ಲಿ ಜನರು 11.00 ಗಂಟೆಯವರೆಗೆ ಎದ್ದಿರುತ್ತಾರೆಂದರೆ ಸರಿಯಲ್ಲ, 10.00 ಗಂಟೆಯವರೆಗೆ ಎದ್ದಿರುತ್ತಾರೆ. ನಾವು ಆಸ್ಪತ್ರೆಯಿಂದ ಮನೆಗೆ ಬಂದಾಗ ಕದಿರಮ್ಮ, ಶಿಲ್ಪ, ನಾಗರಾಜು ಮತ್ತು ಲಕ್ಷ್ಮಿದೇವಮ್ಮ ನನಗೆ ಏನೂ ಹೇಳಿಲ್ಲ ಎಂದರೆ ನಾಗರಾಜು ಹೇಳಿದರು. ನಾಗರಾಜ್ ರವರಿಗೆ ಬೆಳಿಗ್ಗೆ 8.00 ಗಂಟೆಗೆ ವಿಷಯ ಗೊತ್ತಾಯಿತು. ನಾಗರಾಜ್ ರವರು ದೂರನ್ನು ಕೊಟ್ಟಿರಲಿಲ್ಲ, ಊರಿನಲ್ಲಿ ಪಂಚಾಯಿತಿ ಸೇರಿಸುವ ವ್ಯವಸ್ಥೆ ಮಾಡಿದರು.

ಆ ರೀತಿ ಘಟನೆ ನಡೆದಿಲ್ಲ ಮತ್ತು ಆ ಕಾರಣದಿಂದ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ, ನಮ್ಮ ಮನೆಯ ಬಾಗಿಲಿನಿಂದ ಆರೋಪಿತರ ಮನೆ ಕಾಣಿಸುವುದಿಲ್ಲ ಮತ್ತು ಅವರ ಮನೆಯ ಬಾಗಿಲಿನಿಂದ ಫಿರ್ಯಾದಿಯ ಮನೆ ಕಾಣಿಸುವುದಿಲ್ಲ ಎಂದರೆ ಸರಿ. ನಾನು ಹೇಳಿದಂತೆ ಅಲ್ಲಿ ಯಾವುದೇ ಸಂದಿ ಇರುವುದಿಲ್ಲ ಎಂದರೆ ಸರಿಯಲ್ಲ, ನನ್ನ ಮಗಳನ್ನು ಎತ್ತಿಕೊಂಡು ಹೋಗುವಾಗ ಆಕೆ ಕಿರುಚಿಕೊಂಡ ಬಗ್ಗೆ ಹೇಳಿಲ್ಲ, ನನಗೆ ನನ್ನ ಮಗಳು ಬಂದ ತಕ್ಷಣ ವಿಷಯ ಹೇಳಿದಳು. ನನ್ನ ಮಗಳು ಅತ್ಯಾಚಾರದ ಬಗ್ಗೆ ಹೇಳಿಲ್ಲ ಮತ್ತು ಆ ಕಾರಣದಿಂದ ನಾವು ತಕ್ಷಣ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ, ಮುನಿರಾಜುವಿನ ತಾಯಿಗೆ ಹೃದಯದ ತೊಂದರೆ ಇದ್ದು, ಬಹಳ ಕೃಶವಾಗಿದ್ದಾರೆಂದರೆ ಸರಿ. ಮುನಿರಾಜುವಿನ ತಂದೆ ಅಂಗವಿಕಲ ಎಂದರೆ ಸರಿ. ಅವರ ಮನೆಯಲ್ಲಿ ವಯಸ್ಸಾದ ಅಜ್ಜಿ ಇದ್ದಾಳೆ ಎಂದರೆ ಸರಿ.

ಆ ದಿನ ಅವರ ಅಜ್ಜಿ ತಂದೆ ತಾಯಿ ಮನೆಯಲ್ಲಿ ಇದ್ದ ಬಗ್ಗೆ ವಿಚಾರಿಸಿದಾಗ ಅವರು ಊರಿಗೆ ಹೋಗಿದ್ದಾಗಿ ತಿಳಿಯಿತು. ಆ ದಿನ ಯಾವುದೇ ಘಟನೆ ನಡೆದಿಲ್ಲ ಮತ್ತು ಮುನಿರಾಜು ರವರ ತಾಯಿ ಅಜ್ಜಿ ಮನೆಯಲ್ಲಿದ್ದರು ಎಂದರೆ ಸರಿಯಲ್ಲ, ಪಂಚಾಯಿತಿಗೆ ನಾರಾಯಣಸ್ವಾಮಿ, ಹನುಮಂತಪ್ಪ,

ನಾಗಪ್ಪ, ಮಂಜು ಇತರೆ 30 ಜನ ಸೇರಿದ್ದರು. ಆರೋಪಿತರು ಯೂರೂ ಪಂಚಾಯಿತಿಗೆ ಬಂದಿರಲಿಲ್ಲ. ಮುನಿರಾಜುವಿನ ತಾಯಿ ಒಂದು ತಿಂಗಳ ಒಳಗೆ ಮದುವೆ ಮಾಡಿಸುವುದಾಗಿ ಒಪ್ಪಿಕೊಂಡಿದ್ದಳು. ಆ ರೀತಿಯ ಯಾವುದೇ ಘಟನೆ ನಮ್ಮ ಗ್ರಾಮದಲ್ಲಿ ನಡೆದಿಲ್ಲ ಮತ್ತು ಮದುವೆ ಮಾಡಿಕೊಳ್ಳುವ ಬಗ್ಗೆ ಆರೋಪಿತರು ಒಪ್ಪಿಕೊಂಡಿಲ್ಲ ಎಂದರೆ ಸರಿಯಲ್ಲ.



ಯೂವ ಊರಿನಲ್ಲಿ ಹೆಣ್ಣು ನೋಡಿದ್ದರು ಎಂದು ಗೊತ್ತಿಲ್ಲ. ಕೆರೆಯ ಪಕ್ಕ ಯಾವುದೇ ಮನೆಗಳು ಇಲ್ಲ. ಕೆರೆ ತುಂಬಾ ದೂರ ಇರುವುದರಿಂದ ಅಲ್ಲಿ ಪಾತ್ರೆ ತೊಳೆಯಲು ಹೋಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು ಒಬ್ಬಳೇ ಪಾತ್ರೆ ತೊಳೆಯಲು ಹೋಗಿದ್ದಳು. ಪೊಲೀಸರು ಸ್ಥಳದಲ್ಲಿ ನೋಡುತ್ತಿದ್ದರು, ಅಲ್ಲಿ ಏನೂ ಸಿಗಲಿಲ್ಲ.

ಆರೋಪಿತರು ನನ್ನ ಮಗಳಿಗೆ ವಿಷ ಪ್ರಾಷನ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಆಕೆಗೆ ಪ್ರಜ್ಞೆ ತಪ್ಪಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಲ್ಲಿ ಆರೋಪಿತರು ಮನೆ ಬರೆದುಕೊಡುವಂತೆ ಪಂಚಾಯಿತಿ ಮಾಡಿದ್ದರು ಎಂದರೆ ಸರಿಯಲ್ಲ. 1ನೇ ಆರೋಪಿಯ ತಾಯಿಗೆ ಕ್ಯಾನ್ಸರ್ ಕಾಯಿಲೆ ಇದ್ದು, ತಂದೆ ಅಂಗವಿಕಲನಾಗಿದ್ದು, ಏನಾದರೂ ಮಾಡಿ ಆರೋಪಿತರ ಮನೆಯನ್ನು ಹೊಡೆದುಕೊಳ್ಳಬೇಕೆಂದು ನನ್ನ ಮಗಳ ಮುಖಾಂತರ ಸುಳ್ಳು ಕೇಸು ಹಾಕಿಸಿದ್ದೇನೆ ಎಂದರೆ ಸರಿಯಲ್ಲ. ಒಂದು ಕಾರಣ ಬೇಕೆಂದು ನಾವೇ ನಮ್ಮ ಮಗಳ ಬಾಯಿಯ ಹೊರಗೆ ವಿಷ ಉಜ್ಜಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಎಂದರೆ ಸರಿಯಲ್ಲ. ಯಾವ ವಿಷ ಕುಡಿಸಿದ್ದರು ಎಂದು ಗೊತ್ತಿಲ್ಲ. ನಾನು ಬಾಟಲ್‌ಅನ್ನು ನೋಡಿಲ್ಲ, ನನ್ನ ಮಗಳು ಬಾಟಲ್‌ನಲ್ಲಿ ವಿಷ ಕುಡಿಸಿದರು ಎಂದು ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಹೇಳಿದಳು. ನಮಗೂ ಆರೋಪಿತರ ಕುಟುಂಬಕ್ಕೂ ಯಾವುದೇ ದ್ವೇಷ ಇಲ್ಲ. ಆರೋಪಿತರು ಏನೂ ತಪ್ಪು ಮಾಡದೇ ಇದ್ದರೂ ಅವರಿಗೆ ತೊಂದರೆ ಕೊಡಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

**(ಬಿ.ಎಸ್. ರೇಖ)**
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕೋಲಾರ.**

**ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಃ ಕೋಲಾರ**

**ಎಸ್.ಸಿ. ನಂಃ 01/2018**

ಪ್ರಾಸಾ ಃ 2 **(**ಚಾಸಾ ಃ 1**)**

ಪ್ರಮಾಣೀಕರಿಸಿದ ದಿನಾಂಕಃ **03-05-2018**

ಹೆಸರು ಃ ನೊಂದ ಬಾಲಕಿ ತನ್ನ ಹೆಸರನ್ನು ಹೇಳಿರುತ್ತಾಳೆ

ತಂದೆಯ ಹೆಸರು ಃ ವೆಂಕಟರೆಡ್ಡಿ

ವಯಸ್ಸು ಃ 16 ವರ್ಷ

ಕೆಲಸ ಃ ಕೂಲಿ

ವಾಸ ಃ ಬೆಟ್ಟಗೇರಹಳ್ಳಿ

ಆರೋಪಿಯ ಮುಂದೆ ಕೆಂಪು ಬಣ್ಣದ ಪರದೆ ಬಟ್ಟೆ ಇರುವ ಸ್ಟಾಂಡನ್ನು ಇಟ್ಟು ಅವರ ಮುಖ ಸಾಕ್ಷಿಗೆ ಕಾಣದಂತೆ ಮಾಡಲಾಗಿದೆ. (ಸಾಕ್ಷಿಯ ವಿಚಾರಣೆಯನ್ನು Incamera proceedings ಮೂಲಕ ನಡೆಸಲಾಯಿತು) ಕಲಂ 118 ಸಾಕ್ಷ್ಯಿ ಅಧಿನಿಯಮ ಮತ್ತು ಕಲಂ 36, 37 ಪೋಕ್ಸೋ ಕಾಯ್ದೆ ಅಡಿ ಸಾಕ್ಷವನ್ನು ದಾಖಲಿಸಿಕೊಳ್ಳಲಾಯಿತು.

ಅಭಿಯೋಜಕರು ಪೋಕ್ಸೋ ಕಾಯ್ದೆ ಪ್ರಕಾರ ಪ್ರಶ್ನೆಗಳ ಪಟ್ಟಿ ಸಲ್ಲಿಸಿದ್ದು, ಅವುಗಳನ್ನು ಪರಿಶೀಲಿಸಲಾಗಿ ಅವರು ಕೇಳಿದ ಯಾವ ಪ್ರಶ್ನೆಗಳು ಅಸಂಬದ್ದವಾಗದೇ ಇರುವುದರಿಂದ ಅವುಗಳನ್ನು ಸ್ವೀಕರಿಸಬಹುದಾದ ಪ್ರಶ್ನೆಗಳಾಗಿರುತ್ತವೆ. ಕಾರಣ ಅವರ ಕೋರಿಕೆಯಂತೆ ನ್ಯಾಯಾಲಯವು ಅವರು ನೀಡಿದ ಪ್ರಶ್ನೆಗಳನ್ನು ಕೇಳಬಹುದಾಗಿವೆ.

ಸಾಕ್ಷಿಗೆ ಕನ್ನಡ ಬರದೇ ಇರುವ ಕಾರಣ ಶ್ರೀ. ಎಂವಿ ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಿಸಿಕ್ಕೊಳಲಾಯಿತು.

**ಮುಖ್ಯ ವಿಚಾರಣೆಃ- ಮಾನ್ಯ ವಿಶೇಷ ಪಿಪಿ ರವರಿಂದಃ**

ನನ್ನ ತಂದೆ ತಾಯಿಗೆ 4 ಜನ ಮಕ್ಕಳು, ಅವರ ಹೆಸರು ಶಿಲ್ಪ, ಸುನಿತ ಮತ್ತು ಅಣ್ಣನ ಹೆಸರು ವೆಂಕಟೇಶ್. ನನ್ನ ಸುನಿತ ರವರನ್ನು ನಾರಾಯಣಸ್ವಾಮಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಶಿಲ್ಪ ರವರನ್ನು ನಾಗರಾಜ್‌ನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಸುಮಾರು ಒಂದು ವರ್ಷದ ಹಿಂದೆ ನಾರಾಯಣಸ್ವಾಮಿಗೆ ರವರಿಗೆ ಕಾಲು ಮುರಿದಿತ್ತು, ಆಸ್ಪತ್ರೆಯಲ್ಲಿ ರಾಡನ್ನು ತೆಗೆಸಲು ಅವರನ್ನು

ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ನನ್ನ ಅಕ್ಕ, ಭಾವ, ತಂದೆ ತಾಯಿ ಇದ್ದರು. ಸುಮಾರು ಒಂದು ವರ್ಷದ ಹಿಂದೆ ಭಾನುವಾರ ರಾತ್ರಿ 10.00 ಗಂಟೆಗೆ ಮೂತ್ರ ವಿಸರ್ಜನೆಗೆ ಹೊರಗೆ ಬಂದಾಗ ಮುನಿರಾಜು ಬಾಯಿಗೆ ಬಟ್ಟೆ ತುರುಕಿ ಆತನ ಮನೆಯ ರೂಂಗೆ ಎತ್ತಿಕೊಂಡು ಹೋದ, ಆಗ ಅವರ ಮನೆಯಲ್ಲಿ ಯಾರೂ ಇರಲಿಲ್ಲ, ನನ್ನ ಬಟ್ಟೆ ಬಿಚ್ಚಿ ನನ್ನ ಮೇಲೆ ಅತ್ಯಾಚಾರ ಮಾಡಿದ. ನಾನು ತಪ್ಪಿಸಿಕೊಳ್ಳಲು ಹೋದಾಗ ಹಿಂದಿನಿಂದ ನನ್ನ ತಲೆಗೆ ಹೊಡೆದಿದ್ದು, ಯಾವುದರಿಂದ ಹೊಡೆದ ಎಂದು ಗೊತ್ತಿಲ್ಲ, ಬೆಳಿಗ್ಗೆ 6.00 ಗಂಟೆಗೆ ನನಗೆ ಪ್ರಜ್ಞೆ ಬಂತು, ನಾನು ಅವರ ಮನೆಯಿಂದ ಹೊರಗೆ ಬಂದಾಗ ನನ್ನ ಅಕ್ಕ ಮತ್ತು ಭಾವ ನನ್ನನ್ನು ನೋಡಿ ಅವರ ಮನೆಯಿಂದ ಕರೆದುಕೊಂಡು ಬಂದರು. ನಾನು ಈ ವಿಷಯವನ್ನು  ನನ್ನ ಅಕ್ಕನಿಗೆ ತಿಳಿಸಿದ್ದು ನನ್ನ ಅಕ್ಕ ನನ್ನ ತಂದೆ ತಾಯಿಗೆ ಫೋನ್ ಮಾಡಿ ಕರೆಸಿದ್ದರು. ಅವರು ಊರಿನಲ್ಲಿ ಪಂಚಾಯಿತಿಗೆ ಕರೆಸಿದ್ದರು. ನಾನು ಪಂಚಾಯಿತಿಗೆ ಹೋಗಿದ್ದೆ, ಪಂಚಾಯಿತಿಯಲ್ಲಿ ಮದುವೆ ಮಾಡಿಕೊಳ್ಳುವ ಬಗ್ಗೆ ಮಾತನಾಡಿದರು.

ಪಂಚಾಯಿತಿ ಮಾಡಿದಾಗಿನಿಂದ 1ನೇ ತಾರೀಖಿನವರೆಗೆ ಮದುವೆಗೆ ಸಮಯ ಕೋರಿದ್ದರು. 1ನೇ ತಾರೀಖಿನ ಒಳಗೆ ಬೇರೆ ಹುಡುಗಿಯನ್ನು ಮದುವೆ ಮಾಡಿಕೊಳ್ಳಲು ನೋಡುತ್ತಿದ್ದರು. ಮಾರನೆಯ ದಿನ ಪಾತ್ರೆ ತೊಳೆಯಲು ಕೆರೆಗೆ ಹೋಗಿದ್ದಾಗ 5 ಜನ ಆರೋಪಿತರು ಅಲ್ಲಿಗೆ ಬಂದರು, ಆರೋಪಿತರು ನನ್ನನ್ನು ಹಿಡಿದುಕೊಂಡಿದ್ದು, ಆರೋಪಿ ಮುನಿರಾಜು ವಿಷದ ಬಾಟಲ್‌ಅನ್ನು ತೆಗೆದು ನನ್ನ ಬಾಯಿಗೆ ಹಾಕಿದ, ಈ ಹುಡುಗಿ ಇದ್ದರೆ ತೊಂದರೆಯಾಗುತ್ತದೆ ಎಂದು ಹೇಳಿ ನನಗೆ ವಿಷ ಪ್ರಾಷನ ಮಾಡಿಸಿ ಹೊರಟು ಹೋದರು. ಅಲ್ಲಿಗೆ ನನ್ನ ತಂದೆ ತಾಯಿ ಬಂದರು, ನನಗೆ ಪ್ರಜ್ಞೆ ತಪ್ಪಿದ್ದು, ಜ್ಞಾನ ಬಂದಾಗ ಜಾಲಪ್ಪ ಆಸ್ಪತ್ರೆಯಲ್ಲಿದ್ದೆ, ಆಸ್ಪತ್ರೆಗೆ ಪೊಲೀಸರು ಬಂದಿದ್ದು, ಅವರಿಗೆ ಎಲ್ಲಾ ವಿಚಾರ ಹೇಳಿದೆ. ಪೊಲೀಸರು ನನ್ನ ಹೇಳಿಕೆ ಪಡೆದು ಸಹಿ ಪಡೆದುಕೊಂಡಿದ್ದು, ಅದನ್ನು ನಿಪಿ 1 ಮತ್ತು ಸಹಿಯನ್ನು ನಿಪಿ 1(ಎ )ಎಂದು ಗುರ್ತಿಸಲಾಯಿತು. ಆಸ್ಪತ್ರೆಯಲ್ಲಿ 3 ದಿನ ಇದ್ದೆ, ನಂತರ ಊರಿಗೆ ಹೋದೆ. ನಂತರ ಅಲ್ಲಿಗೆ ಪೊಲೀಸರು ಬಂದು ಅತ್ಯಾಚಾರ ಮಾಡಿದ ಸ್ಥಳ ತೋರಿಸಲು ಕೇಳಿದ್ದು, ನಾನು ಆರೋಪಿತರ ಮನೆಯನ್ನು ತೋರಿಸಿದೆ. ಅಲ್ಲಿ ನನ್ನ ಸಹಿ ಪಡೆದುಕೊಂಡಿದ್ದು, ಸದರಿ ಮಹಜರ್‌ಅನ್ನು ನಿಪಿ 2 ಮತ್ತು ಸಹಿಯನ್ನು ನಿಪಿ 2(ಎ) ಎಂದು ಗುರ್ತಿಸಲಾಯಿತು.

ನಂತರ ಪೋಲೀಸರು ಕೆರೆಯ ಬಳಿ ಕರೆದುಕೊಂಡು ಹೋಗಿ ಅಲ್ಲಿ ಸ್ಥಳ ತೋರಿಸಿದ್ದು, ಆ ಬಗ್ಗೆ ಮಹಜರ್‌ನ್ನು ಮಾಡಿದ್ದು, ಅದನ್ನು ನಿಪಿ 3 ಮತ್ತು ಸಹಿಯನ್ನು ನಿಪಿ 3 (ಎ) ಎಂದು ಗುರ್ತಿಸಲಾಯಿತು. ನಂತರ ಪೊಲೀಸರು ನನ್ನನ್ನು ಮಹಜರ್ ಆದ ಮಾರನೆಯ ದಿನ ಮುಳಬಾಗಿಲು ನ್ಯಾಯಾಲಯಕ್ಕೆ ಕರೆದುಕೊಂಡು ಹೋಗಿದ್ದು, ನ್ಯಾಯಾಧೀಶರ ಮುಂದೆ ಎಲ್ಲಾ ವಿಚಾರ ಹೇಳಿದ್ದೇನೆ ಮತ್ತು ಅಲ್ಲಿ ನನ್ನ ಸಹಿ ಪಡೆದುಕೊಂಡರು. ನಾನು ಆಸ್ಪತ್ರೆಯಲ್ಲಿದ್ದಾಗ ವೈದ್ಯರು ನನ್ನಿಂದ ಬಟ್ಟೆಗಳನ್ನು ಮತ್ತು ವಸ್ತುಗಳನ್ನು ಸಂಗ್ರಹಿಸಿದ್ದರು. ನ್ಯಾಯಾಲಯದ ಮುಂದೆ ಇರುವ ಒಂದು ಟಾಪ್ ಮತ್ತು ಡೈಪರ್ ಇವುಗಳನ್ನು ಸೀಲ್ಡ್ ಕವರ್‌ನಿಂದ ತೆಗೆದಿದ್ದನ್ನು ಸಾಕ್ಷಿ ಗುರ್ತಿಸಿದ್ದು, ಅವುಗಳನ್ನು ಮು.ಮಾ 1 ಮತ್ತು 2 ಎಂದು ಗುರ್ತಿಸಲಾಯಿತು.

ನಾನು 2ನೇ ತರಗತಿಯವರೆಗೆ ಓದಿದ್ದೇನೆ. ನ್ಯಾಯಾಲಯದ ಮುಂದೆ ಇರುವ ಸೀಲ್ಡ್ ಕವರ್‌ನಲ್ಲಿರುವ ಸಾಕ್ಷಿಯ ಹೇಳಿಕೆಯನ್ನು ತೆಗೆದು ತೋರಿಸಿದಾಗ ಸಾಕ್ಷಿ ಗುರ್ತಿಸಿದ್ದು, ಅದನ್ನು ನಿಪಿ 4 ಮತ್ತು ಸಹಿಯನ್ನು ನಿಪಿ 4 (ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲು:- ಆರೋಪಿಗಳ ಪರ ಶ್ರೀ. ಎಂಎಂಜಿ ವಕೀಲರಿಂದ :-**

ನಾನು ಊಲವಾಡಿ ಶಾಲೆಯಲ್ಲಿ 2ನೇ ತರಗತಿಯವರೆಗೆ ಓದಿದ್ದೇನೆ. ನನ್ನ ಅಕ್ಕಂದಿರು ಎಲ್ಲಿಯವರೆಗೆ ಓದಿದ್ದಾರೆಂದು ಗೊತ್ತಿಲ್ಲ. ಸಾಕ್ಷಿ ವೆಂಕಟರೆಡ್ಡಿ ನನ್ನ ಸ್ವಂತ ಅಪ್ಪ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ತಾಯಿ ಇಬ್ಬರೂ ಎಸ್‌ಸಿ ಜಾತಿಯವರು. ವೆಂಕಟರೆಡ್ಡಿ ರವರ ತಂದೆಯ ಹೆಸರು ಗೊತ್ತಿಲ್ಲ. ನನ್ನ ತಾಯಿಯ ಸ್ವಂತ ಊರು ಅಮ್ಮರೆಡ್ಡಿಪಲ್ಲಿ ಗ್ರಾಮ. ವೆಂಕಟರೆಡ್ಡಿ ಲಕ್ಷ್ಮಿದೇವಮ್ಮನನ್ನು ಮದುವೆಯಾಗಿಲ್ಲ ಎಂದರೆ ಸರಿಯಲ್ಲ.

ನಮ್ಮ ಅಕ್ಕನ ಮದುವೆಯಾಗುವ ಸಮಯಕ್ಕೆ ನಾವು ಬೆಟ್ಟಗೇರಹಳ್ಳಿಗೆ ಬಂದಿದ್ದು, ನಾವು ಅಂದರೆ ನಾನು, ನನ್ನ ತಂದೆ-ತಾಯಿ ವೆಂಕಟೇಶ್ ಒಂದು ಮನೆಯಲ್ಲಿ ವಾಸ ಇದ್ದೆವು. ಘಟನಾ ಸಮಯದಲ್ಲಿ ನನ್ನ ಅಣ್ಣ ವೆಂಕಟೇಶ್ ಮನೆಯಲ್ಲಿದ್ದ. ನಮ್ಮ ಮನೆಯಲ್ಲಿ ನಾನು ನಮ್ಮ ಅಕ್ಕಂದಿರಾದ

ಸುನಿತ, ಶಿಲ್ಪ, ವೆಂಕಟೇಶ್, ಲಕ್ಷ್ಮಿದೇವಮ್ಮ, ನಾರಾಯಣಸ್ವಾಮಿ, ನಾಗರಾಜು, ರವಿ ಎಲ್ಲರೂ ಒಂದೇ ಮನೆಯಲ್ಲಿ ವಾಸ ಇದ್ದರು.

-4 ಪಿಡಬ್ಲ್ಯೂ: 2

ನಮ್ಮ ಮನೆಯ ಪೂರ್ವಕ್ಕೆ ನಮ್ಮ ಮಾವನ ಮನೆ, ಪಶ್ಚಿಮಕ್ಕೆ ಆರೋಪಿತರ ಮನೆ, ಉತ್ತರಕ್ಕೆ ಯಾರ ಮನೆ ಎಂದು ಗೊತ್ತಿಲ್ಲ, ದಕ್ಷಿಣಕ್ಕೆ ಯಾವುದೇ ಮನೆಗಳು ಇಲ್ಲ. ನಾನು ಮನೆಯಿಂದ ಹೊರಗೆ ಬಂದಾಗ ನನ್ನ ಅಕ್ಕ ಮಾವ ಮನೆಯಲ್ಲಿದ್ದರು. ನಮ್ಮ ಮನೆಯ ಬಾಗಿಲಿನಿಂದ ಆರೋಪಿತರ ಮನೆ ಕಾಣುವುದಿಲ್ಲ ಮತ್ತು ಅವರ ಮನೆಯಿಂದ ನಮ್ಮ ಮನೆ ಕಾಣುವುದಿಲ್ಲ ಎಂದರೆ ಸರಿ. ಅಲ್ಲಿ ಸುತ್ತ ಮುತ್ತಲ ಮನೆಗಳವರು ಟಿವಿ ನೋಡಿಕೊಂಡು 11.00 ಗಂಟೆಯವರೆಗೆ ಎದ್ದಿರುತ್ತಾರೆಂದರೆ ಸರಿ. ನನಗೆ ಆಗ ಕಿರುಚಲು ಆಗಲಿಲ್ಲ. ಆರೋಪಿ ಮುನಿರಾಜು ನನ್ನನ್ನು ಎತ್ತಿಕೊಂಡು ಹೋಗದೇ ಇದ್ದುದರಿಂದ ನಾನು ಕಿರುಚಿಲ್ಲ ಎಂದರೆ ಸರಿಯಲ್ಲ.

ಆಗ ನಾರಾಯಣಸ್ವಾಮಿ ಕಾಲು ಮುರಿದಿರಲಿಲ್ಲ ಮತ್ತು ರಾಡು ತೆಗೆಸಲು ನನ್ನ ತಂದೆ ತಾಯಿ ಮತ್ತು ಅಕ್ಕ ಹೋಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ಮತ್ತು ಅಣ್ಣ ನಾನು ಮೂತ್ರ ವಿಸರ್ಜನೆಗೆ ಹೋಗಿ ವಾಪಸ್ಸು ಬರದೇ ಇದ್ದುದರಿಂದ ಹುಡುಕಿಕೊಂಡು ಬರಲಿಲ್ಲ. ನಮ್ಮ ಮನೆಯವರೆಲ್ಲಾ ಊರೆಲ್ಲಾ ಹುಡುಕಾಡಿದ್ದು, ಎಲ್ಲೋ ಇದ್ದಾಳೆ ಬರುತ್ತಾಳೆ ಎಂದು ಸುಮ್ಮನಾದರು. ನಮ್ಮ ತಂದೆ ತಾಯಿ ಸಹ ಊರಿನಲ್ಲಿ ವಿಚಾರ ಮಾಡಿದರು. ನನ್ನ ತಂದೆ ತಾಯಿ ಬೆಳಿಗ್ಗೆ ಬಂದರು. ನಾನು ತಪ್ಪಿಸಿಕೊಳ್ಳುವ ಪ್ರಯತ್ನ ಪಟ್ಟಾಗ ನಾನು ಮೂತ್ರ ವಿಸರ್ಜನೆಗೆ ಹೋದಾಗ ನನ್ನ ತಲೆಗೆ ಹೊಡೆದ, ಯಾವ ಆಯುಧದಿಂದ ಹೊಡೆದ ಎಂದು ಗೊತ್ತಿಲ್ಲ. ಆ ರೀತಿ ನನ್ನ ತಲೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಆ ರೀತಿ ತಪ್ಪಿಸಿಕೊಳ್ಳುವಾಗ ನನ್ನ ಮತ್ತು ಆರೋಪಿಯ ಬಟ್ಟೆಗಳು ಹರಿದಿರಲಿಲ್ಲ.

ನಾನು ಗಾಜಿನ ಬಳೆಗಳನ್ನು ಹಾಕಿಕೊಳ್ಳುತ್ತೇನೆ. ಆರೋಪಿಯ ಮನೆಯಲ್ಲಿ ನನ್ನ ಬಳೆದ ಹೊಡೆದಿದ್ದು, ಅವು ಬಿದ್ದಿತ್ತು, ಪೊಲೀಸರು ಬಂದಾಗ ಆ ಹೊಡೆದ ಬಳೆಗಳು ಅಲ್ಲಿ ಇರಲಿಲ್ಲ. ನಾನು ಪೊಲೀಸರಿಗೆ ಬಳೆಗಳು ಹೊಡೆದಿದ್ದ ಬಗ್ಗೆ ಹೇಳಿದ್ದೆ. ನನ್ನ ಮೈ ಮೇಲೆ ಯೂವುದೇ ರೀತಿಯ ಗೀಚಿದ ತರಚಿದ ಮತ್ತು ಕಚ್ಚಿದ ಗಾಯಗಳು ಆಗಿರಲಿಲ್ಲ. ನಾನು ಆರೋಪಿಯಿಂದ ತಪ್ಪಿಸಿಕೊಳ್ಳುವಾಗ, ಆತನಿಗೆ

ಗೀಚಿಲ್ಲ, ಹೊಡೆದಿಲ್ಲ ಮತ್ತು ಕಚ್ಚಿಲ್ಲ. ಈ ಘಟನೆಯಾದ ಒಂದು ವಾರಕ್ಕೆ ನಾನು ಕೆರೆಯ ಬಳಿ ಹೋಗಿದ್ದೆ.



ಆರೋಪಿತರ ಮನೆಯಲ್ಲಿ ಒಬ್ಬ ಅಜ್ಜಿ ಇದ್ದು, 1ನೇ ಆರೋಪಿಯ ತಾಯಿ ಹೃದಯದ ರೋಗದವರು ಇದ್ದಾರೆ ಎಂದರೆ ಸರಿ. 1ನೇ ಆರೋಪಿಯ ತಂದೆ ಅಂಗವಿಕಲರು ಎಂದರೆ ಗೊತ್ತಿಲ್ಲ, ಅವರು ಆ ಮನೆಯಲ್ಲಿ ಇಲ್ಲ. ನಾನು 1ನೇ ಆರೋಪಿಯ ತಾಯಿ ಮತ್ತು ಅಜ್ಜಿಗೆ ಈ ವಿಷಯ ಹೇಳಿಲ್ಲ. ಆರೋಪಿತರ ಮನೆಯಲ್ಲಿ ರೂಂ ಇರುವುದಿಲ್ಲ ಮತ್ತು ಒಂದೇ ಹಾಲ್ ಇದೆ ಎಂದರೆ ಸರಿ. ಆರೋಪಿ ನನ್ನ ಬಟ್ಟೆ ಬಿಚ್ಚುವಾಗ ನಾನು ಗಲಾಟೆ ಮಾಡಲಿಲ್ಲ. ನಾನು ನ್ಯಾಯಾಧೀಶರ ಮಂದೆ ಹೇಳಿಕೆ ಕೊಡುವಾಗ ಬೆಳಿಗ್ಗೆ 3.00 ಗಂಟೆಗೆ ಪ್ರಜ್ಞೆ ಬಂತು ಎಂದು ಹೇಳಿದ್ದೇನೆ. 3.00 ಗಂಟೆಗೆ ಪ್ರಜ್ಞೆ ಬಂದಿದ್ದು ಸರಿ. ನಾನು ಪ್ರಜ್ಞೆ ಬಂದ ತಕ್ಷಣ ಮನೆಯಿಂದ ಹೊರಗೆ ಬಂದೆ. 3.00 ಗಂಟೆಗೆ ನನ್ನ ಅಕ್ಕ ಮತ್ತು ಭಾವ ನನ್ನನ್ನು ಮನೆಗೆ ಕರೆದುಕೊಂಡು ಹೋದರು.

ನಾನು ಪೊಲೀಸರ ಮುಂದೆ " ಬೆಳಿಗ್ಗೆ ಮನೆಯಿಂದ ವಾಪಸ್ಸು ಬಂದೆ " ಎಂದು ಹೇಳಿದ್ದೇನೆ. ನಾನು ಬೆಳಿಗ್ಗೆ ಮನೆಗೆ ಹೋಗಿದ್ದು ಸರಿ. ದಿಃ 03-09-2017 ರಂದು ಈ ಘಟನೆ ನಡೆದಿದೆ ಎಂದು ಪೊಲೀಸರ ಮುಂದೆ ಹೇಳಿರುವುದು ನಿಜ, ನ್ಯಾಯಾಧೀಶರ ಮುಂದೆ ದಿಃ 01-10-2017 ರಂದು ಘಟನೆಯಾಗಿದೆ ಎಂದು ಹೇಳಿರುವುದು ಸುಳ್ಳು. ನಾನು ನ್ಯಾಯಾಧೀಶರ ಮುಂದೆ " ದಿಃ 02-10-2017 ರಂದು 1ನೇ ಆರೋಪಿಯ ತಂದೆ-ತಾಯಿ ಆತನಿಗೆ ಹೆಣ್ಣು ನೋಡಲು ಬೇರೆ ಊರಿಗೆ ಹೋಗಿದ್ದು, ಅವರನ್ನು ಕರೆಸಿದ್ದೆವು " ಎಂದು ಹೇಳಿಲ್ಲ. ಮುನಿರಾಜು ಪಂಚಾಯಿಗೆ ಬಂದಿರಲಿಲ್ಲ.

ನಾನಕು ಪೊಲೀಸರ ಮುಂದೆ " ನನಗೆ ಅತ್ಯಾಚಾರ ಆದ 15 ದಿನಗಳ ನಂತರ ಕೆರೆಯ ಬಳಿ ಪಾತ್ರೆ ತೊಳೆಯಲು ಹೋಗಿದ್ದಾಗ ವಿಷ ಪ್ರಾಷನ ಮಾಡಿಸಿದರು ಎಂದು ಹೇಳಿದ್ದು, ನ್ಯಾಯಾಧೀಶರ ಮುಂದೆ ಅತ್ಯಾಚಾರ ಆದ ಮಾರನೆಯ ದಿನ ಕೆರೆಯ ಬಳಿ ಪಾತ್ರೆ ತೊಳೆಯಲು ಹೋಗಿದ್ದೆ ಎಂದು ಹೇಳಿದ್ದು, ಪೊಲೀಸರ ಮುಂದೆ ಹೇಳಿರುವುದು ನಿಜ. ಪ್ಲಾಸ್ಟಿಕ್ ಬಾಟಲ್‌ನಲ್ಲಿ ವಿಷ

ತಂದಿದ್ದರು. ನಾನು ನ್ಯಾಯಾಧೀಶರ ಮುಂದೆ ಗ್ಲಾಸ್‌ನಲ್ಲಿ ತಂದಿದ್ದ ವಿಷವನ್ನು ಕುಡಿಸಿದರು ಎಂದು ಹೇಳಿಲ್ಲ. ನನ್ನ ದೇಹದ ಒಳಗೆ ವಿಷ ಹೋಗಿರಲಿಲ್ಲ ಎಂದರೆ ಸರಿಯಲ್ಲ.



ನಾನು ಆಸ್ಪತ್ರೆಗೆ ಸೇರಿದ 3 ದಿನಕ್ಕೆ ಪೊಲೀಸರು ಬಂದಿದ್ದರು. ಪೊಲೀಸರು 3 ದಿನ ಆದ ನಂತರ ಆಸ್ಪತ್ರೆಗೆ ಬಂದಿಲ್ಲ ಎಂದರೆ ಸರಿಯಲ್ಲ. ದೂರನ್ನು ನಾನೇ ಬರೆದಿದ್ದೇನೆ. ಅದರಲ್ಲಿರುವ ಅಕ್ಷರಗಳು ನನ್ನದೇ. ಆಸ್ಪತ್ರೆಯಲ್ಲಿ ದೂರನ್ನು ಬರೆದುಕೊಟ್ಟೆ. ಬರವಣಿಗೆ ನನ್ನದಲ್ಲ ಮತ್ತು ಅದರಲ್ಲಿ ಬರೆದಿರುವ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. ದೂರು ಪಡೆದುಕೊಂಡ ಮಾರನೆಯ ದಿನ ಪೋಲೀಸರು ಮಹಜರ್‌ಗೆ ಬಂದರು. ನಾನು ನನ್ನ ತಾಯಿ ಮತ್ತು ಪೋಲೀಸರು ಇದ್ದರು. ಬೇರೆ ಯಾರೂ ಇರಲಿಲ್ಲ. ಪಕ್ಕದ ಮನೆಯ ಇಬ್ಬರು ಮಹಜರ್ ಸಮಯಕ್ಕೆ ಬಂದರು. ಅವರ ಹೆಸರು ಗೊತ್ತಿಲ್ಲ. ಪೋಲೀಸರು ಅಲ್ಲಿಂದ ಏನನ್ನೂ ತೆಗೆದುಕೊಂಡಿಲ್ಲ.

ಕೆರೆಯ ಬಳಿ ನಾನು, ನನ್ನ ತಂದೆ-ತಾಯಿ ಮತ್ತು ಬೇರೆ ಜನರು ಇದ್ದರು. ಎರಡೂ ಮಹಜರ್‌ಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆ ದಿನ ನಾನು ಮೂತ್ರ ವಿಸರ್ಜನೆಗೆ ಹೋಗಿಲ್ಲ ಮತ್ತು ಆರೋಪಿ ನನ್ನನ್ನು ಬಾಯಿಗೆ ಬಟ್ಟೆ ತುರುಕಿ ಎತ್ತಿಕೊಂಡು ಹೋಗಿ ಅತ್ಯಾಚಾರ ಮಾಡಿಲ್ಲ ಎಂದರೆ ಸರಿಯಲ್ಲ. ನನಗೆ ಪ್ರಜ್ಞೆ ತಪ್ಪಿರಲಿಲ್ಲ ಎಂದರೆ ಸರಿಯಲ್ಲ. ಆ ರೀತಿಯ ಯಾವುದೇ ಘಟನೆ ನಡೆದಿಲ್ಲ ಮತ್ತು ನನ್ನ ಅಕ್ಕನಿಗೆ ಏನೂ ತಿಳಿಸಿಲ್ಲ ಎಂದರೆ ಸರಿಯಲ್ಲ. ಪಂಚಾಯಿತಿಗೆ ಸುಮಾರು 10 ಜನ ಇದ್ದು, ಅವರ ಹೆಸರು ಹೇಳಲು ಆಗುವುದಿಲ್ಲ. ಆ ರೀತಿಯ ಯಾವುದೇ ಪಂಚಾಯಿತಿ ನಡೆದಿಲ್ಲ ಮತ್ತು ಆ ಕಾರಣದಿಂದ ನನಗೆ ಅವರು ಗೊತ್ತಿಲ್ಲ ಎಂದರೆ ಸರಿಯಲ್ಲ. ಒಬ್ಬರ ಹೆಸರು ನಾಗಪ್ಪ ಎಂದು ಗೊತ್ತು.

ಕೆರೆ ತಂಬಾ ದೂರ ಇರುವುದರಿಂದ ಯಾವ ಹೆಣ್ಣು ಮಕ್ಕಳು ಅಲ್ಲಿಗೆ ಪಾತ್ರೆ ತೊಳೆಯಲು ಹೋಗುವುದಿಲ್ಲ ಎಂದರೆ ಸಾಕ್ಷಿ ಕೆರೆ ತುಂಬಾ ಹತ್ತಿರ ಇದೆ ಎನ್ನುತ್ತಾರೆ. ಕೆರೆಯಿಂದ ಊರಿನ ಮನೆಗಳು

ಕಾಣುವುದಿಲ್ಲ ಕಾರಣ ಮನೆಗಳು ಅಡ್ಡ ಇದೆ. ಪಂಚಾಯಿತಿಯಲ್ಲಿ ಮುನಿರಾಜು ಮದುವೆ ಮಾಡಿಕೊಳ್ಳುವುದಾಗಿ ಹೇಳಿದ್ದ. ಪಂಚಾಯಿತಿಗೆ ಮುನಿರಾಜು ಬಂದಿದ್ದ ಅವನ ತಾಯಿ ಸಹ ಬಂದಿದ್ದರು. 1ನೇ ಆರೋಪಿ ಯಾವ ಹುಡುಗಿಯನ್ನು ಮದುವೆ ಮಾಡಿಕೊಳ್ಳಲು ಪ್ರಯತ್ನ ಪಟ್ಟಿದ್ದ ಎಂದು ಗೊತ್ತಿಲ್ಲ. ಅತ್ಯಾಚಾರ ಆದ 15 ದಿನಕ್ಕೆ ಈ ಘಟನೆ ನಡೆದಿದ್ದು ಆ ಮದ್ಯದಲ್ಲಿ ಯಾರೂ ನನಗೆ ದೂರು ಕೊಡುವಂತೆ ಹೇಳಿರಲಿಲ್ಲ.

-7- ಪಿಡಬ್ಲ್ಯೂಃ 2

ಬಟ್ಟೆಗಳನ್ನು ಒಣಗಲು ಹಾಕಿ ನಾನು ಕುಳಿತಿದ್ದಾಗ ಆರೋಪಿತರು ಕೆರೆಯ ಬಳಿ ಬಂದರು. ನಾನು ಪಾತ್ರೆ ಮತ್ತು ಬಟ್ಟೆ ಎರಡನ್ನೂ ತೊಳೆಯಲು ಹೋಗಿದ್ದೆ. ನಾನು ಆರೋಪಿತರನ್ನು ಸುಮಾರು 5 ಅಡಿ ದೂರದಲ್ಲಿ ನೋಡಿದೆ. ಆರೋಪಿತರು ಈ ರೀತಿ ಮಾಡುತ್ತಾರೆಂದು ನನಗೆ ಗೊತ್ತಾಗಲಿಲ್ಲ. ಅಷ್ಟು ಜನ ಆರೋಪಿತರು ಯಾವ ಕಾರಣಕ್ಕಾಗಿ ಹಾಗೆ ಬರುತ್ತಿದ್ದಾರೆಂದು ಯೋಚನೆ ಮಾಡಿರಲಿಲ್ಲ. ಆಗ ಸಮಯ ಮದ್ಯಾಹ್ನ 3.00 ಗಂಟೆಯೊಗಿತ್ತು. ಆ ಸಮಯದಲ್ಲಿ ದನ ಕಾಯುವವರು ಮತ್ತು ಬೇರೆ ಬಟ್ಟೆ ಒಗೆಯುವವರು ಅಲ್ಲಿ ಯಾರೂ ಇರಲಿಲ್ಲ. ನಮ್ಮ ಊರಿನವರು ಆ ಕರೆಯ ಸುತ್ತ ಮುತ್ತ ದನ ಮೇಯಿಸಲು ಹೋಗುತ್ತಾರೆ. ನಾನು ಕಿರುಚಿಕೊಂಡಾಗ ನಮ್ಮ ತಂದೆ ತಾಯಿ ಬಂದರು. ಅವರು ಬರುವುದನ್ನು ನೋಡಿ ಆರೋಪಿತರು ಹೊರಟು ಹೋದರು. ನಾನು ಕಿರುಚಿಕೊಳ್ಳದಿದ್ದರೆ ನನ್ನ ತಂದೆ ತಾಯಿ ಬರುತ್ತಿರಲಿಲ್ಲ.

ನನಗೆ ಆರೋಪಿತರು ಹಿಡಿದುಕೊಂಡು ವಿಷ ಪ್ರಾಷನ ಮಾಡಿಸಿದ್ದರಿಂದ ನನಗೆ ಪ್ರಜ್ಞೆ ತಪ್ಪಿತ್ತು. ನನ್ನ ಬಟ್ಟೆಗಳು ಹರಿದಿತ್ತೋ ಇಲ್ಲವೋ ನೆನಪಿಲ್ಲ. ನಮ್ಮ ಮನೆಯಲ್ಲಿ ತುಂಬಾ ಜನ ಇದ್ದಾರೆ. ಆರೋಪಿತರ ಮನೆಯಲ್ಲಿ ತುಂಬಾ ಕಡಿಮೆ ಜನ ಇದ್ದಾರೆ. ಏನಾದರೂ ಮಾಡಿ ಆರೋಪಿತರನು ಅವರ ಮನೆಯಿಂದ ಓಡಿಸಬೇಕೆಂದು ನನ್ನ ಮಾವ ನಾರಾಯಣಸ್ವಾಮಿ ನಮ್ಮ ತಂದೆ ತಾಯಿ, ನಾಗರಾಜ್, ನನ್ನ ಅಕ್ಕಂದಿರು ಎಲ್ಲರೂ ಸೇರಿಕೊಂಡು, ಆರೋಪಿತರು ಯಾವುದೇ ವಿಷ ಪ್ರಾಷನ ಮಾಡಿಸದಿದ್ದರೂ ನಮ್ಮ ಮನೆಯವರೇ ನಮ್ಮ ಮನೆಯವರು ನನ್ನ ಬಾಯಿಯ ಹೊರಭಾಗದಲ್ಲಿ ವಿಷ ಹಚ್ಚಿ ಕರೆದುಕೊಂಡು ಹೋಗಿ ಸುಳ್ಳು ದೂರು ಕೊಡಿಸಿದ್ದಾರೆಂದರೆ ಸರಿಯಲ್ಲ. ನನ್ನ ದೇಹಕ್ಕೆ

ಯಾವುದೇ ವಿಷ ಸೇರಿರಲಿಲ್ಲ ಮತ್ತು ನನಗೆ ಪ್ರಜ್ಞೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಮುನಿರಾಜು ವಿಷ ಪ್ರಾಷನ ಮಾಡಿಸಿದ್ದು, ಉಳಿದ ಆರೋಪಿತರು ಗಟ್ಟಿಯಾಗಿ ಹಿಡಿದುಕೊಂಡಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ.

ನನಗೆ ಮುಳಬಾಗಿಲು ನ್ಯಾಯಾಧೀಶರ ಮುಂದೆ ಈ ರೀತಿ ಹೇಳಬೇಕೆಂದು ಯಾರೂ ಹೇಳಿಕೊಟ್ಟಿಲ್ಲ. ನಮ್ಮ ಕುಟುಂಬದವರ ಚಿತಾವಣೆಯ ಮೇರೆಗೆ ದೂರನ್ನು ತಯಾರಿಸಿದ್ದೇನೆ ಎಂದರೆ



ಸರಿಯಲ್ಲ. ಆ ರೀತಿ ಘಟನೆ ನಡೆಯದೇ ಇದ್ದುದರಿಂದ ಪೊಲೀಸರ ಮುಂದೆ ಮತ್ತು ನ್ಯಾಯಾಧೀಶರ ಮುಂದೆ ಬೇರೆ ಬೇರೆ ದಿನಾಂಕಗಳನ್ನು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರ ಕುಟುಂಬ ಸರ್ವನಾಶ ಮಾಡಲು ಅವರ ಮನೆಯನ್ನು ಹೊಡೆದುಕೊಳ್ಳಬೇಕೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ.)**

ಓದಿ ಹೇಳಿ ಕೇಳಿ ಸರಿ ಇದೆ.

(ಬಿ.ಎಸ್. ರೇಖ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೋಲಾರ.